<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>

<u>ಆಳಂದ</u>

<u>ಸಿ.ಸಿ. ನಂಬರ 4512/2021</u> ಸಿ.ಡಬ್ಲೂ.**6** ಪಿ.ಡಬ್ಲೂ.**6**

| | |
|---|---|
| ಹೆಸರು | ಸೂರ್ಯಕಾಂತ |
| ತಂದೆ/ಗಂಡ | ಸಿದ್ದರಾಮ |
| ವಯಸ್ಸು | 38 ವರ್ಷ |
| ಉದ್ಯೋಗ | ಕೂಲಿಕೆಲಸ |
| ವಾಸಸ್ಥಳ | ಮಮದಾಪೂರ |

ದಿನಾಂಕ 26-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ಚಾಸಾ-1 ರಿಂದ 5, 7 ರಿಂದ 16 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ದಾಖಲೆಗಳ ಮೇಲೆ ಸಹಿ ಮಾಡು ಅಂತಾ ಹೇಳಿದ ಕಾರಣ ನಾನು ಸಹಿಗಳನ್ನು ಮಾಡಿರುತ್ತೇನೆ. ಸಾಕ್ಷಿಯು ಜಪ್ತಿ ಪಂಚನಾಮೆಗಳಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ ಕಾರಣ ಜಪ್ತಿ ಪಂಚನಾಮೆಗಳನ್ನು ನಿಪಿ. 4 ರಿಂದ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 4(ಎ) ರಿಂದ 6(ಎ)ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

<u>ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:</u>

ದಿಃ 29-01-2021 ರಂದು ಬೆ. 09.00 ರಿಂದ 09.30, 12.15 ರಿಂದ 13.00, 16.00 ರಿಂದ 16.45 ಗಂಟೆಯವರೆಗೆ, ನನ್ನ ಹಾಗೂ ಚಾಸ-7 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಸ್ಥಳದಿಂದ ಒಂದು ಹೀರೊ ಕಂಪನಿಯ ಎಚ್. ಎಫ್. ಡಿಲಕ್ಸ ವಾಹನ, ಹೀರೋ ಹೊಂಡಾ ಕಂಪನಿಯ ಮೋಟಾರ ಸೈಕಲ, ಒಂದು ಸುಪ್ರೋ ಮಾಕ್ಸಿ ಟ್ರಕ್‌ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ. 4 ರಿಂದ 6 ರಲ್ಲಿ ಇರುವ ಮಾಹಿತಿ ಗೊತ್ತಿದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರಃ ವಕೀಲರಿಂದ:</u>

ಪಾಟೀ ಸವಾಲು ಇಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ